ರಾಜಶೇಖರರನ್ನು ಕುರಿತಲ್ಲದೆ ಬೇರೆ ವಿಷಯ, ವಿದ್ಯಮಾನಗಳನ್ನು ಕುರಿತು ಮಾತನಾಡುವಾಗಲೂ, ಅವರೊಂದಿಗಿನದ್ದು ಮಾತ್ರವಲ್ಲದೆ ಬೇರೆಯವರೊಂದಿಗಿನ ಸಂಬಂಧದಲ್ಲೂ ಆ ತರಹದ ವರಸೆಗಳು ಇರಕೂಡದು ಎಂಬ ಅಯಾಚಿತ ಪಾಠವೂ ರಾಜಶೇಖರರ ಒಡನಾಟದಿಂದಾಗಿ ಅವರೆಲ್ಲರಿಗೂ – ನಮ್ಮೆಲ್ಲರಿಗೂ – ಆಗಿಬಿಟ್ಟಿದೆ.

ಈವತ್ತು ನಮ್ಮ ದೇಶ ಮತ್ತು ನಮ್ಮ ರಾಜ್ಯದಲ್ಲಿ ಅಧಿಕಾರದಲ್ಲಿರುವುದು ಸಂಘ ಪರಿವಾರ–ಬಿಜೆಪಿ ಕೂಟ. ರಾಜಶೇಖರರನ್ನು ಹಚ್ಚಿಕೊಂಡಿರುವವರೆಲ್ಲರೂ ನಿತ್ಯ ಆತಂಕದಲ್ಲಿದ್ದು ಆ ಕೂಟದ ಫ್ಯಾಸಿಸ್ಟ್ ವಿಚಾರ ಮತ್ತು ಕಾರ್ಯಗಳ ವಿರುದ್ಧ ಸೆಣಸಬೇಕಾಗಿದೆ. ಆದ್ದರಿಂದ, ರಾಜಶೇಖರರಿಗೆ ಈವರೆಗೆ ಶ್ರದ್ಧಾಂಜಲಿ ಸಲ್ಲಿಸಿರುವವವರೆಲ್ಲರೂ, ಸಹಜವಾಗಿಯೆ, ಅವರ ವ್ಯಕ್ತಿತ್ವದ ಆಕ್ಟಿವಿಸ್ಟ್ ಮಗ್ಗುಲಿಗೆ ಒತ್ತು ಕೊಟ್ಟಿದ್ದಾರೆ. ವಿಶೇಷವೆಂದರೆ, ಅವರು ಕೊಟ್ಟಿರುವ ಒತ್ತಿನೊಳಗೊಂದು ಒತ್ತಿದೆ: ರಾಜಶೇಖರರ ದಣಿವರಿಯದ ಅಕ್ಟಿವಿಸಮ್‌ನ ಹಿಂದೆ ಆಳವಾದ ಆರ್ದ್ರತೆಯಿತ್ತು ಅನ್ನುವುದನ್ನು ಅವರೆಲ್ಲರೂ ಮನದುಂಬಿಯೂ ಮನದುಂಬುವಂತೆಯೂ ಉದಾಹರಣೆಗಳ ಸಮೇತ ಕಾಣಿಸಿದ್ದಾರೆ.

‘ವಾರ್ತಾಭಾರತಿ’ ಪತ್ರಿಕೆಯಲ್ಲಿ ಸಂವರ್ತ ಆಚಾರ್ಯ, ಸುದ್ದಿದಿನ ಜಾಲಪತ್ರಿಕೆಯಲ್ಲಿ ಪಟ್ಟಾಭಿರಾಮ ಸೋಮಯಾಜಿ, ತಮ್ಮತಮ್ಮ ಫೇಸ್‌ಬುಕ್ ಖಾತೆಯ ಪುಟಗಳಲ್ಲಿ ರಹಮತ್ ತರೀಕೆರೆ ಹಾಗೂ ಕೆ. ಪಿ. ಸುರೇಶ, ಮತ್ತು, ಬಹುಮುಖ್ಯವಾಗಿ, ರಾಜಶೇಖರರನ್ನು ಕುರಿತು ಸುದೀರ್ಘ, ಒಂದು ಗಂಟೆಯ ಹೊತ್ತು, ಮಾತನಾಡುತ್ತ ವಿಡಿಯೊ ಮುದ್ರಣಮಾಡಿ ಜನಶಕ್ತಿ ಮೀಡಿಯಾದ ಯೂಟ್ಯೂಬ್ ವಾಹಿನಿಯಲ್ಲಿ ಪ್ರಕಟಿಸಿದ ಫಣಿರಾಜ್ – ಇವರು, ಮತ್ತು ಇಲ್ಲಿ ಸ್ಥಳದ ಕೊರತೆಯಿಂದಾಗಿ ಹೆಸರಿಸಲಾಗದ ಇನ್ನು ಹಲವರು, ಬೇರೆಬೇರೆ ರೀತಿಯಲ್ಲಿ ಈ ವಿಷಯವನ್ನು ಕಾಣಿಸಿದ್ದಾರೆ. ಹಲವು ದಶಕಗಳ ಕಾಲದ ಒಡನಾಟ, ಸಂವಾದದಲ್ಲಿ ನಾನೂ ಅವರ ಆ ಆಕ್ಟಿವಿಸಮ್ಮನ್ನು, ಅದರ ಆರ್ದ್ರತೆಯನ್ನು ಕಂಡುಂಡಿದ್ದೇನೆ.

ಆದಿ ಉಡುಪಿ ಬತ್ತಲೆ ಪ್ರಕರಣದ ವಿಚಾರಣೆ ನಡೆಯುತ್ತಿದ್ದಾಗ ಅವರು ಒಂದು ದಿನವೂ ತಪ್ಪಿಸದೆ ಉಡುಪಿಯ ಕೋರ್ಟಿಗೆ ಹಾಜರಾಗುತ್ತಿದ್ದದ್ದು; 1998ರ ಸುರತ್ಕಲ್ ಮತೀಯ ಗಲಭೆಗಳಲ್ಲಿ ನೊಂದವರನ್ನು ಮಾತನಾಡಿಸಿ ತಥ್ಯಸಂಗ್ರಹ ಮಾಡಲು ರಾಜಶೇಖರ್, ಫಣಿರಾಜ್ ಮತ್ತಿತರರು ಆ ಪ್ರದೇಶದಲ್ಲಿ ಓಡಾಡುತ್ತಿದ್ದಾಗ, ಒಬ್ಬ ಹೆಂಗಸು ಮತ್ತು ಆಕೆಯ ಸೊಸೆ, ಇಬ್ಬರ ಪಾಲಿಗೂ ತೊಡಲು ಒಂದೇ ಕುಪ್ಪಸವಿದ್ದುದರಿಂದ, ಅವರಲ್ಲೊಬ್ಬರು ಅದನ್ನು ತೊಟ್ಟಾಗ, ಇನ್ನೊಬ್ಬರು ಅವರ ಚಿಕ್ಕ ಗುಡಿಸಲಿನ ಕತ್ತಲೆಯಲ್ಲಿ ಮರೆಯಾಗಿ ಕೂರಬೇಕಿತ್ತು ಎಂಬ ವಿಷಯವನ್ನು ಆ ಹೆಂಗಸರು ಬಾಯಿಬಿಟ್ಟು ಹೇಳದಿದ್ದರೂ, ಅವರ ನಡೆಯನ್ನು ನೋಡಿ ಬೇರೆಯವರು ಗುರುತಿಸದಿದ್ದರೂ ರಾಜಶೇಖರರ ಸೂಕ್ಷ್ಮಮನಸ್ಸು ಗುರುತಿಸಿ ಅವರ ಬಡತನದ ಬಗ್ಗೆ ಮರುಗುವಾಗ, ಆ ಹೆಂಗಸರ ಪೈಕಿ ಹಿರಿಯಾಕೆಯು ಆ ಹಿಂಸಾಚಾರದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಳು ಅನ್ನುವುದು ಅವರ ಮರುಕಕ್ಕೆ ಅಡ್ಡಿಯಾಗದಿದ್ದದ್ದು; ಮಾವೋವಾದಿ ಎಂಬ ಆಪಾದನೆ ಹೊತ್ತಿದ್ದ ಚಿಕ್ಕಮಗಳೂರು ಜಿಲ್ಲೆಯ ಯುವತಿಯ ಪರವಾಗಿ (ಅದು ಆಕೆಯ ನಾಗರಿಕ–ಸಾಂವಿಧಾನಿಕ ಹಕ್ಕು ಎಂಬ ಕಾರಣಕ್ಕೆ) ತಮ್ಮ ಸ್ವಂತ ಹಣದಿಂದ ಕೋರ್ಟಿಗೆ ಜಾಮೀನು ಕಟ್ಟಿ, ಆಕೆ ಕಾಯಿದೆಯ ಪ್ರಕಾರ ಉಡುಪಿಯ ಕೋರ್ಟಿನ ಮುಂದೆ ಆಗಾಗ ಹಾಜರಾಗಬೇಕಿದ್ದ ಸಮಯದಲ್ಲೆಲ್ಲ ಆಕೆಗಿಂತ ಮೊದಲೇ ಕೋರ್ಟನ್ನು ತಲುಪಿ, ಆಕೆಯನ್ನು ಬರಮಾಡಿಕೊಂಡು, ಅಂದಿನ ವಿಚಾರಣೆಯುದ್ದಕ್ಕೆ ತಾವೂ ಹಾಜರಿದ್ದು, ಆಕೆಗೆ ಬೆಳಗಿನ ತಿಂಡಿ, ಮಧ್ಯಾಹ್ನದ ಊಟ, ಸಂಜೆಯ ತಿಂಡಿ ಕೊಡಿಸಿ, ಆಕೆ ಊರಿಗೆ ಮರಳಲು ಬೇಕಾದ ಬಸ್ ಟಿಕೇಟಿನ ಖರ್ಚನ್ನೂ ಕೆಲವೊಮ್ಮೆ ಅವರು ಭರಿಸುತ್ತಿದ್ದದ್ದು; ಹಾಗೆಯೆ ಇನ್ನು ಹಲವರಿಗೂ ನೆರವಾದದ್ದು; ಕೋಮುವಾದೀ ಹಿಂಸಾಚಾರಕ್ಕೆ ಈಡಾಗಿದ್ದವರ ಸಂದರ್ಶನ ಮಾಡಿ, ಅದರ ಎಲ್ಲ ವಿವರಗಳನ್ನು, ತುಂಬ ವಸ್ತುನಿಷ್ಠವಾಗಿ ಸಂಗ್ರಹಿಸಿ, ಘಟನೆಯ ಸಂದರ್ಭ ಮತ್ತು ಹಿನ್ನೆಲೆಯನ್ನು ಪಕ್ಷಪಾತವಿಲ್ಲದೆ, ಪೂರ್ವಗ್ರಹಗಳಿಗೆ ಎಡೆಕೊಡದೆ ವಿಶ್ಲೇಷಣೆಮಾಡಿ ಲೇಖನ ತಯಾರಿಸುತ್ತಿದ್ದ ಪರಿ – ಇವೆಲ್ಲವುಗಳ